A.—Sri KADIDAL MANJAPPA (Minister for Revenue and Public Works).—

(*a*) During February 1952.

(*b*) Yes.

(*c*) when sanction is accorded.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ತಾಲ್ಲೂಕಿಗೆ ಸೇರಿದ ದೊಡಘಟ್ಟ ಕೆರೆಯ ಸುತ್ತ ಮುತ್ತಣ ಪ್ರದೇಶವು ಕ್ಷಾಮಪ್ರದೇಶವೆಂದು ಯಾವಾಗಲೂ ಪರಿಗಣಿಸಲಾಗಿತ್ತ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗಲೂ ಅಲ್ಲಿ ಕ್ಷಾಮದ ಭೀತಿ ಇತ್ತು ಎಂಬ ಅಂಶ ಗೊತ್ತಿಲ್ಲ. ಹೋದವರ್ಷವೇನೋ ಅಲ್ಲಿ ಅಭಾವಪರಿಸ್ಥಿತಿ ತಲೆದೋರಿತ್ತು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ದೊಡಘಟ್ಟ ಕೆರೆಗೆ ಫೀಡರ್ ಚಾನಲ್ ತೆಗೆಯುವ ಬಗ್ಗೆ ಎಷ್ಟು ಸಾರಿ ಮನವಿಗಳು ಬಂದಿವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇಲ್ಲಿ ಈಗಲೂ ತರೀ ಕಂದಾಯ ವಸೂಲು ಮಾಡುತ್ತಿದ್ದಾರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ತಿಳಿಸಲು ನೋಟೀಸ್ ಬೇಕು. ಆದರೆ ಒಂದು ವಿಚಾರ ಗಮನಕ್ಕೆ ತರಬೇಕಾಗಿದೆ. ಈ ಕೆಲಸ ಕೈಕೊಳ್ಳುವುದಕ್ಕೆ ರೈತರು ಕಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದಕ್ಕಾಗಿ ಈ ಕೆಲಸವನ್ನು ಕೈಕೊಳ್ಳುವುದು ನಿಧಾನವಾಗಿದೆ.

ಶ್ರೀ ಮುಲ್ಕಗೋವಿಂದರೆಡ್ಡಿ.—ಅಲ್ಲಯ ರೈತರಿಗೆ ಸರ್ಕಾರದವರು ಯಾವ ರೀತಿಯ ಸಹಾಯವನ್ನೂ ಮಾಡದೆ ತರೀ ಕಂದಾಯ ವಸೂಲು ಮಾಡುವುದು ನ್ಯಾಯವೇ ?

ಶ್ರೀ ಕಡಿದಾಳ್ ಮಂಜಪ್ಪ.— ಆ ವಿಚಾರ ನಮಗೆ ಗೊತ್ತಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈಗ ಇದಕ್ಕೆ ಆಗಿರುವ ಅಂದಾಜೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದೆ ಇದ್ದ ಅಂದಾಜು ಸುಮಾರು 89 ಸಾವಿರ ರೂಪಾಯಿಗಳು. ಈಗಿನ ಪ್ರಕಾರ ಒಂದು ಲಕ್ಷರೂಪಾಯಿಗಳಾಗಬಹುದು.

ಶ್ರೀ ಮುಲ್ಕಗೋವಿಂದರೆಡ್ಡಿ.—ಈ ರಿವೈಸ್ಡ್ ಎಸ್ಟಿಮೇಟ್ ತಮ್ಮ ಅಂಗೀಕಾರಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನೂ ಬಂದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಕೆಲಸವನ್ನು ಪ್ರಾರಂಭಿಸಲು administrative sanction ಮುಂಚೆ ಆಗ ಬೇಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಾದರೆ ಈ ಕೆಲಸವನ್ನು ಯಾವಾಗ ಪ್ರಾರಂಭಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—Sanction ಮಂಜೂರು ಆದನಂತರ.

Mr. SPEAKER.—It is not an answer to the supplementary.

Sri KADIDAL MANJAPPA.—An estimate amounting Rs. 89,000 was prepared but the raiyats were not prepared to pay their contribution.

Mr. SPEAKER.—Probable period—that is what he wants.

Sri KADIDAL MANJAPPA.—As early as possible and the raiyats on their part must agree to pay contribution and water rate.

ಶ್ರೀ ಮುಲ್ಕ ಗೋವಿಂದರೆಡ್ಡಿ.—ರೈತರು ತಮ್ಮ ಭಾಗದ ಹಣವನ್ನು ನಾಳೆಯೇ ಕೊಡಲು ತಯಾರಾಗಿದ್ದರೆ ಈ ಕೆಲಸವನ್ನು ಪ್ರಾರಂಭಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡುತ್ತೇವೆ.

Changing the Taluk Headquarters from Heggaddevankote to Saragur.

Q.—456. Sri H. K. SHIVARUDRAPPA (Gundlupet-Heggaddevankote).—

Will the Government be pleased to state:—

(*a*) whether the *pros* and *cons* of changing the headquarters of Heggaddevankote taluk to Saragur have been examined;

(*b*) the population of Saragur and Heggaddevankote towns and the revenue of the Municipalities thereof (particulars may be furnished separately for each town);

(*c*) the decision that they have taken in this matter?

A.—Sri Kadidal MANJAPPA (Minister for Revenue and Public Works).—

(*a*) The question is under examination.

(*b*).—

Town	*Population*	*Revenue of the Municipality*
		Rs.
Heggaddevankote	1861	5,474
Saragur ..	3,634	11,223

(*c*) *Vide* reply to item (a) above.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹೆಗ್ಗಡದೇವನ ಕೋಟೆ ತಾಲ್ಲೂಕು ಹೆಡ್‌ಕ್ವಾರ್ಟರ್ಸನ್ನು ಸರಗೂರಿಗೆ ಬದಲಾವಣೆ ಮಾಡಬೇಕೆಂದು ಯಾವಾಗಿನಿಂದ ಮನವಿ ಬರುತ್ತಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ವರ್ಷಗಳಿಂದಲೂ ಬರುತ್ತಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸರ್ಕಾರದವರ ತೀವ್ರ ಪರ್ಯಾಲೋಚನೆಗೆ ಇದು ಯಾವಾಗ ಒಳಪಟ್ಟಿತು ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿನಿಂದಲೂ ಇದು ಪರಿಶೀಲನೆಯಲ್ಲಿದೆ. ಈ ರೀತಿ ತಾಲ್ಲೂಕು ಹೆಡ್ ಕ್ವಾರ್ಟರನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ಬದಲಾವಣೆ ಮಾಡಲು ತೊಂದರೆ ಇದೆ, ಇದಕ್ಕೆ ಹೆಚ್ಚು ಹಣ ಬೇಕಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ನೀವು ಒದಗಿಸಿರುವ ಪ್ರಜಾಸಂಖ್ಯೆ ಮತ್ತು ವರಮಾನದ ಅಂಕಿಅಂಶಗಳಿಂದ ನರಗೂರನ್ನು ತಾಲ್ಲೂಕು ಹೆಡ್‌ಕ್ವಾರ್ಟರಾಗಿ ಮಾಡುವುದು ಉಚಿತವೆಂದು ಕಂಡುಬರುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ಹೆಗ್ಗಡದೇವನಕೋಟೆಯ ಒಂದು ಪಕ್ಷದ ವಿರೋಧಾಭಿಪ್ರಾಯ ವ್ಯಕ್ತಪಟ್ಟಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ಸ್ಥಳದ ಇನ್ನೊಂದು ಪಕ್ಷದವರಿಂದ ಅಲ್ಲಿ ಸೌಕರ್ಯವಿಲ್ಲವೆಂದು ಮನವಿ ಬಂದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಈ ವಿಚಾರದಲ್ಲಿ ನಾನು ಹೆಗ್ಗಡದೇವನಕೋಟೆಗೆ ಹೋಗಿದ್ದಾಗ ಆಲ್ಲಿಯ ಕೆಲವು ಪ್ರಮುಖರು ಬದಲಾವಣೆ ಅನಾವಶ್ಯಕವೆಂದೂ, ನರಗೂರಿಗೆ ಬಂದಾಗ ಅಲ್ಲಿಯ ಕೆಲವು ಪ್ರಮುಖರು ಈರೀತಿಯ ಬದಲಾವಣೆಯಿಂದ ಸೌಕರ್ಯ ವಿದೆಯೆಂದೂ ತಿಳಿಸಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ರೀತಿ ಭಿನ್ನಾಭಿಪ್ರಾಯವಿದ್ದಾಗ ಯಾವುದು ಸರಿ, ಯಾವುದು ತಪ್ಪು ಎಂಬ ಬಗ್ಗೆ ಸರ್ಕಾರದವರು ಏನು ತೀರ್ಮಾನಕ್ಕೆ ಬಂದಿದ್ದಾರೆ?

Mr. SPEAKER.—It is under consideration—so he has answered. You have pointed out that the population has doubled.

Sri M. LINGANNA.—Has it come to the notice of the Government that the taluk office building has been burnt down?

Sri KADIDAL MANJAPPA.—Yes.

Sri M. LINGANNA.—What necessary action has been taken to rebuild it?

Sri KADIDAL MANJAPPA.—Not the entire taluk office has been burnt down; only a portion.

Sri M. LINGANNA.—Is it not necessary that, in the interest of revenue, the headquarters should be shifted from Heggaddevankote Taluk to Saragur which has more population?

Mr. SPEAKER.—That question has been answered.

Construction of bridges in Saklespur Taluk.

Q.—538. Sri B. N. BORANNA GOWDA (Belur).—

Will the Government be pleased to state:—

(*a*) whether repeated representations have been received from raiyats and prominent persons for the immediate construction of bridges in the Malnad parts of Hassan District;

(*b*) when the estimate for the construction of a bridge across the Benaganahalla in Honabalu Hobli of Saklespur Taluk was sanctioned;

(*c*) whether petitions have been received praying for the construction of a bridge across the Hunasakkalkolli, Mankenahole in Hethur Hobli, Saklespur Taluk;

(*d*) the steps they have taken in the matter?

A.—Sri KADIDAL MANJAPPA (Minister for Revenue and Public Works).—

(*a*) Yes.
(*b*) March 1947.
(*c*) Yes.
(*d*) The proposals are under consideration.

ಶ್ರೀ ಬಿ. ಎಚ್. ಬೋರಣ್ಣಗೌಡ.—1947ರಲ್ಲಿ ಬೆನಗಾನಹಳ್ಳಕ್ಕೆ ಸೇತುವೆ ಕಟ್ಟಲು ಅಂದಾಜು ಎಷ್ಟಕ್ಕೆ ತಯಾರಾಯಿತು?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ಬಗ್ಗೆ ಕೆಲಸ ವೇನಾದರೂ ನಡೆದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲಸ ಸ್ವಲ್ಪಮಟ್ಟಿಗೆ ನಡೆದು ಅರ್ಧಕ್ಕೆ ನಿಂತುಹೋಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈಗ ಆಗಿರುವ ಕೆಲಸಕ್ಕೆ ಎಷ್ಟು ಖರ್ಚಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಾವಿರ ರೂಪಾಯಿಗಳು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗಾದರೆ ಇದಕ್ಕಾಗಿ ಖರ್ಚುಮಾಡಿದ ಹತ್ತಾರು ಸಾವಿರ ರೂಪಾಯಿ ವ್ಯರ್ಥವಾದಂತೆ ಆಗಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ಸ್ವಲ್ಪ ವ್ಯತ್ಯಾಸವಾಗಿದೆ. ಅಲ್ಲಿ ರಸ್ತೆಯೊಂದನ್ನು ಏರ್ಪಡಿಸುವ ವಿಚಾರದಲ್ಲಿ ತೊಂದರೆಯುಂಟಾಗಿದೆ. ಚೀಫ್ ಇಂಜಿನಿಯರು ಆ ಸ್ಥಳದ ಅಜಮಾಯಿಷಿ ನಡೆಸಿ ಒಂದು ನಿರ್ಧಾರಕ್ಕೆ ಬರಬೇಕೆಂದು ಸೂಚನೆ ಕೊಟ್ಟಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ರೀತಿ ಸಾರ್ವಜನಿಕ ಹಣವನ್ನು ಪೋಲುಮಾಡುವುದು ಸರ್ಕಾರದ ನೀತಿಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆಗ ಅಲ್ಲಿದ್ದ ಅಧಿಕಾರಿಗಳ ಕರ್ತವ್ಯಲೋಪದಿಂದ ಹೀಗಾಗಿರುತ್ತದೆ.